**<u>ಸಾಕ್ಷಿಯನ್ನು ದಿನಾಂಕಃ 23-08-2023 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.</u>**

**<u>ಪಾಟೀ ಸವಾಲು ಃ ಶ್ರೀ ಕೆ.ವಿ.ಕೆ ಪ್ರತಿವಾದಿ ಪರ ವಕೀಲರಿಂದಃ</u>**

ವಾದಿಯರು ನನಗೆ ದೂರದ ಸಂಬಂಧಿಕರು ಆಗಬೇಕು. ದಾವಾ ಆಸ್ತಿಗಳ ನಿಖರವಾದ ವೀಸ್ತೀರ್ಣ ಮತ್ತು ನಂಬರಗಳನ್ನು ಹೇಳಲು ಬರುವುದಿಲ್ಲ.

ದಾವಾ ಆಸ್ತಿಗಳು ಮೂಲತಃ ಗಂಗಪ್ಪ ಶಿವರುದ್ದಪ್ಪ ಭಂಗಿ ಇವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಜಗದಾಳದಲ್ಲಿದ್ದ ಆಸ್ತಿಯನ್ನು ಮಾರಿ ಎಲ್ಲಾ ದಾವಾ ಆಸ್ತಿಗಳನ್ನು ರಂಗಪ್ಪ ಶಿವರುದ್ದಪ್ಪ ಭಂಗಿ ವರ ಹೆಸರಲ್ಲಿ ಖರೀದಿಸಿದ್ದಾರೆ ಎಂದರೆ ಸಾಕ್ಷಿ ಎಲ್ಲರೂ ಕೂಡಿ ಖರೀದಿಸಿದ್ದಾರೆ ಎಂದು ನುಡಿಯುತ್ತಾರೆ. ಜಗದಾಳದ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಆಗಿದ್ದವು. ಸದರಿ ಆಸ್ತಿಗಳ ನಂಬರ ನನಗೆ ಹೇಳಲು ಬರುವುದಿಲ್ಲಾ.

ದಾವಾ ಆಸ್ತಿಗಳನ್ನು ಗಂಗಪ್ಪ ಶಿವರುದ್ದಪ್ಪ ಭಂಗಿ ಇವರು ಪ್ರತಿವಾದಿ ನಂ. 6 ಇವರಿಗೆ ಭಕ್ಷಿಸು ಪತ್ರ ಮಾಡಿಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿಗಳ ಉತಾರೆಗಳಲ್ಲಿ ಗಂಗಪ್ಪ ಶಿವರುದ್ದಪ್ಪ ಭಂಗಿ ಇವರ ಹೆಸರು ಮಾಲ್ಕಿನಾತೆಯಿಂದ ಇತ್ತು ಎಂದರೆ ಸರಿ.

ವಾದಿಯರು ಪ್ರತಿವಾದಿಯರ ಮೇಲೆ ಪಾಲು ವಾಟ್ನಿ ಕೇಳಿ ದಾವೆ ದಾಖಲಿಸಿದ್ದಾರೆ . ವಾದಿಯರು ಮತ್ತು ಪ್ರತಿವಾದಿಯರು ಬೇರೆ-ಬೇರೆಯಾಗಿ ಅಂದಾಜು 5-6 ವರ್ಷಗಳಿಂದ ವಾಸಿಸುತ್ತಾರೆ ಮುಂದುವರೆದು ಸಾಕ್ಷಿ 2010 ರಿಂದ ಬೇರೆಯಾಗಿ ವಾಸಿಸುತ್ತಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಪ್ರತಿವಾದಿ ನಂ.1 ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನಾನು ಆಗಲೀ , ವಾದಿ ನಂ.1 ಆಗಲೀ ದಾವಾ ಆಸ್ತಿಗಳು ಪ್ರತಿವಾದಿ ನಂ.1 ಅವರ ಸ್ವಯಾರ್ಜಿತ ಆಸ್ತಿ ಅಲ್ಲ ಎಂದು ತೋರಿಸಲು ಯಾವುದೇ ಡೈರಿ ಅಥವಾ ದಾಖಲೆ ನೋಡಿಲ್ಲ. ದಾವಾ ಆಸ್ತಿಗಳು ಹಿರಿಯ ಆಸ್ತಿಗಳು ಎಂದು ಹಿರಿಯ ಹೇಳಿಕೆಗಳ ಮೇರೆಗೆ ಹೇಳುತ್ತಿದ್ದೇನೆ.

2015 ನೇ ಸಾಲಿನಲ್ಲಿ ದಾವಾ ಆಸ್ತಿಯ ಪ್ರತ್ಯೇಕ ಕಬ್ಜಾ ವಹಿವಾಟಿಯಲ್ಲಿ ಪ್ರತಿವಾದಿ ನಂ.1 ಇದ್ದರು. ಅವರ ಹೆಸರಿಗೆ ಗಂಗಪ್ಪ ಮತ್ತು ಅವರ ಮಕ್ಕಳ ಜೊತೆಗೆ ಹಿರಿಯರ ಮಾಡಿದ ವಾಟ್ನಿ ಪ್ರಕಾರ ಬಂದಿರುತ್ತದೆ. ಈ ವಾಟ್ನಿ ಪ್ರಕಾರ ಎಲ್ಲ ಮಕ್ಕಳಿಗೂ ವಾಟ್ನಿ ಬಂದಿರುತ್ತದೆ ಎಂದರೆ ಸರಿ .

ಪ್ರತಿವಾದಿ ನಂ. 4 ರಿಂದ 7 ಅವರಿಗೆ ಪಾಲು ವಾಟ್ನಿ ಬಂದಿರುತ್ತದೆ ಎಂದರ ಸರಿ . ಈ ದಾವೆಯಲ್ಲಿ ವೈಯಕ್ತಿಕವಾಗಿ ನಾನು ಸಾಕ್ಷ ಪ್ರಮಾಣ ಪತ್ರ ಸಲ್ಲಿಸಿಲ್ಲ. ದಾವೆಯ ಬಗ್ಗೆ ಮಾಹಿತಿ ಇಲ್ಲದೇ ಇದ್ದರೂ ಸಹಿತ ವಾದಿಯರು ನಮ್ಮ ಸಂಬಂಧಿಕರು ಎಂಬ ಕಾರಣನಿಂದ ಸುಳ್ಳು ಸಾಕ್ಷ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

ವಾದಿ ಪರ ವಕೀಲರು ಮರು ವಿಚಾರಣೆಗೆ ಕಾಲವಕಾಶ ಕೋರಿದ್ದು , ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಾಕ್ಷಿಯ ಸಹಿಃ